ಕೂಡ ಸಂಗ್ರಹಣೆ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ರೀತಿಯ ಕೆಲಸ ಎಲ್ಲೂ ಕೂಡ ಆಗಿಲ್ಲ. ನಾಳೆಯಿಂದ ಖರೀದಿ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆನ್ನುವ ಮಾತನ್ನು ನಾನು ತಮ್ಮ ಮೂಲಕ ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ಖರೀದಿ ಎನ್ನುವುದು ಅಧಿಕೃತವಾಗಿ ಎಲ್ಲೂ ಕೂಡ ನಿಂತಿಲ್ಲ. ಗೋಡೌನ್ ಪ್ರಾಬ್ಲಂ ಇದೆ ಎಂದು ತಮಗೆಲ್ಲಾ ಗೊತ್ತಿದೆ. ತುಮಕೂರಿನಲ್ಲೂ ಪ್ರಾಬ್ಲಂ ಇದೆ. ಒಂದು ಕಡೆ ಪೇಮೆಂಟ್ ಪ್ರಾಬ್ಲಂ, ಇನ್ನೊಂದು ಕಡೆ ಗೋಡೌನ್ ಪ್ರಾಬ್ಲಂ ಇರುವುದರಿಂದ ಈ ಪರಿಸ್ಥಿತಿ ಬಂದಿರುವುದು. ನಾಳೆಯೇ ನಾವು ಕ್ಯಾಬಿನೆಟ್ ಸಬ್‌ಕಮಿಟಿಯನ್ನು ಕರೆದು ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

(viii): ಕೃಷಿ ಮತ್ತು ತೋಟಗಾರಿಕೆ ಇಲಾಖೆಯಿಂದ ಎಂಡೋಸಲ್ಫಾನ್ ಸಿಂಪಡಿಸಿರುವುದರಿಂದ ಆಗಬಹುದಾದ ತೊಂದರೆಗಳು

ಡಾ। ಎ.ಬಿ. ಮಾಲಕರೆಡ್ಡಿ (ಆರೋಗ್ಯ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳಾದ ಸದಾನಂದಗೌಡರು ಮತ್ತು ವಿಶ್ವೇಶ್ವರ ಹೆಗಡೆಯವರು ಒಂದು ಕಳವಳವನ್ನು ವ್ಯಕ್ತಮಾಡಿದರು. ನೆರೆಯ ತಾಲ್ಲೂಕಿನಲ್ಲಿ ಕೀಟ ನಾಶಕ ಔಷಧವನ್ನು ಸಿಂಪಡಣೆ ಮಾಡಿದ್ದಾರೆ. ನಮ್ಮಲ್ಲೂ ಕೂಡ ಅದನ್ನು ಉಪಯೋಗ ಮಾಡಿದರೆ ಹಾನಿಕರವಾದೀತು ಎಂದು ವ್ಯಕ್ತಮಾಡಿದರು. ಆರೋಗ್ಯ ಇಲಾಖೆಯ ಮತಿಯಿಂದ ಉಪಯೋಗ ಮಾಡುವುದು ಕೇವಲ ಮೂರೇ ಮೂರು ದ್ರಾವಣಗಳು. ಡಿಡಿಟಿ 50 ಪರ್‌ಸೆಂಟ್, ನಲಥಿಯಾನ್ ಮತ್ತು ಸಿಂಥೆಟಿಕ್ ಪೈರಥ್ರೀಯಾನ್, ಎಂಡೋಸಲ್ಫಾನ್ ಎಂಡೋಮಾಸ್ಕಿಟ್ ಕೆಮಿಕಲ್ ಅಲ್ಲ. ಅದನ್ನು ಉಪಯೋಗ ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಡಿ.ಎ. ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ತಮ್ಮ ಇಲಾಖೆಯಿಂದ ಆದಾಗುತ್ತದೆ ಎಂದು ಹೇಳಿದ್ದಲ್ಲ. ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯಿಂದ ಎಂಡೋಸಲ್ಫಾನ್ ಸಿಂಪಡಣೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲಿ ಆಗುವ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ಇದು ಅತ್ಯಂತ ಗಂಭೀರವಾದ ವಿಚಾರ. ವಿಶೇಷವಾಗಿ ಕೃಷಿ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಎಲ್ಲಾ ಪತ್ರಿಕೆಗಳಲ್ಲೂ ಕೂಡ ಬಂದಿದೆ. ಎಂಡೋಸಲ್ಫಾನ್ ಸಿಂಪಡಣೆಯಿಂದಾಗಿ ಅಂಗವಿಕಲ ಮಕ್ಕಳು ಹುಟ್ಟುವಂಥದ್ದು, ಮತ್ತು ಮಕ್ಕಳು ಇದ್ದವರು ಕೂಡ ಬೇರೆ ಬೇರೆ ಖಾಯಿಲೆಗಳಿಂದ ಬಳಲುವಂಥದ್ದು, ಇಂಥದ್ದೆಲ್ಲಾ ಆಗುವುದು, ಎಲ್ಲಾ ಭಾಗದಲ್ಲೂ ನಡೆದಿದೆ. ಕೇರಳದಲ್ಲೂ ನಡೆದಿದೆ. ಕೇರಳದಲ್ಲಿ ಅದರ ವಿಚಿತ್ರವಾದ ವಿಪರ್ಯಾಸದ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ರಾಷ್ಟ್ರ ವ್ಯಾಪಿಯಾಗಿ ಬಂದಿರುವುದನ್ನು ನೋಡಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಈ ಭಾಗದಲ್ಲಿ ಇರುವ ಗೇರು ಮರಕ್ಕೂ ಇದನ್ನು ಸಿಂಪಡಣೆ ಮಾಡುತ್ತಾರೆನ್ನುವುದು ಈಗ ಸರ್ಕಾರದ ಗಮನಕ್ಕೆ ಬಂದಿದೆ. ಇವತ್ತಿನ ಪತ್ರಿಕೆಗಳಲ್ಲಿ ಭಾರೀ ದೊಡ್ಡದಾಗಿ ಬಂದಿದೆ. ಇಷ್ಟಲ್ಲದೆ ಕ್ಯಾಬಿನೆಟ್‌ನಿಂದಲೂ ಅದು ತೀರ್ಮಾನವಾಗಿದೆ. ಸುಮಾರು ಮೂರು ಕೋಟಿ ರೂಪಾಯಿಗಳಷ್ಟು ಎಂಡೋಸಲ್ಫಾನ್

ಅನ್ನು ಖರೀದಿ ಮಾಡಬೇಕೆಂದು ಹೇಳಿ ತೀರ್ಮಾನವಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ಇದರಿಂದಾಗಿ ಸಮಾಜಕ್ಕೆ ತೊಂದರೆಯಾಗತಕ್ಕ ಸಂಗತಿ ನಿರ್ಮಾಣವಾಗುತ್ತದೆ. ಇದನ್ನು ತಕ್ಷಣ ನಿಲ್ಲಿಸಬೇಕು. ಖರೀದಿಯನ್ನು ಕೂಡ ನಿಲ್ಲಿಸಬೇಕೆನ್ನುವ ಆಗ್ರಹವನ್ನು ಕೂಡ ಮಾಡಿದ್ದೇನೆ. ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜಯಪ್ರಕಾಶ್ ಕೆ. ಹೆಗಡೆ: ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷಿ ಸಚಿವರು ಇಲ್ಲದೆ ಇದ್ದಾಗ ಪ್ರಸ್ತಾಪ ಮಾಡಿದ್ದೆ. ಟ್ರೈಟೋಪಾಸ್ ಅನ್ನು ಖರೀದಿ ಮಾಡಿ ನುಸಿ ರೋಗಕ್ಕೆ ಅದನ್ನು ಬಳಸುವಂತೆ ಮಾಡಿದ್ದಾರೆ. ಈಗಾಗಲೇ ಮಾನ್ಯ ಸದಾನಂದಗೌಡರು ಹೇಳಿದಂತೆ ಜನಮಾಹಿನಿ ಪತ್ರಿಕೆಯಲ್ಲಿ ದೊಡ್ಡದಾಗಿ ಆರ್ಟಿಕಲ್‌ನ್ನು ಹೊಟ್ಟಿದ್ದಾರೆ. ಅದರಲ್ಲಿ ಏನು ಹೇಳುತ್ತಾರೆಂದರೆ ಅಮೇರಿಕನ್ ಎನ್‌ವಿರೋನ್‌ಮೆಂಟಲ್ ಫೆಡರಲ್ ಏಜೆನ್ಸಿಯವರು ಬ್ಯಾನ್ ಮಾಡಿದ್ದಾರೆ. ಯುರೋಪಿಯನ್ ಕಂಟ್ರೀಸ್‌ನವರು ಬ್ಯಾನ್ ಮಾಡಿದ್ದಾರೆ. ಇಂಡೋನೇಷ್ಯದವರು ಬ್ಯಾನ್ ಮಾಡಿದ್ದಾರೆ. ಆಂಧ್ರಪ್ರದೇಶದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಖರೀದಿ ಮಾಡಬಾರದೆಂದು ಹೇಳಿ ಆದೇಶವನ್ನೇ ನೀಡಿದ್ದಾರೆ. ಕೊಯಮತ್ತೂರಿನ ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಇದರ ದುಷ್ಪರಿಣಾಮವನ್ನೆಲ್ಲಾ ಈಗಾಗಲೇ ಹೇಳಿದ್ದಾರೆ. ನುಸಿ ರೋಗಕ್ಕೋಸ್ಕರ ಅದನ್ನು ಉಪಯೋಗ ಮಾಡಿ ರೈತರನ್ನೇ ಸಂಪೂರ್ಣವಾಗಿ ನಾಶ ಮಾಡತಕ್ಕ ಪರಿಸ್ಥಿತಿ ನಿರ್ಮಾಣವಾಗಬಾರದು. ಇದರ ಬಗ್ಗೆ ವಿಚಾರಣೆಯನ್ನು ಮಾಡಿ ವಿಜ್ಞಾನಿಗಳ ವರದಿಯನ್ನು ತೆಗೆದುಕೊಳ್ಳುವವರೆಗೆ, (ಒಂದು ವಾರ ತಡವಾದರೂ ತೊಂದರೆಯಿಲ್ಲ) ಇದರ ದುಷ್ಪರಿಣಾಮದ ಬಗ್ಗೆ ವಿಜ್ಞಾನಿಗಳ ಹತ್ತಿರ ಕೇಳಿ ತಿಳಿದುಕೊಳ್ಳಬೇಕು. ಇಲ್ಲದಿದ್ದರೆ ಸರ್ಕಾರವೇ ಇದಕ್ಕೆ ಕಾರಣೀಯಾಗುತ್ತದೆ ಎನ್ನುವುದನ್ನು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ಎಂಡೋಸಲ್ಫಾನ್ ಅನ್ನು ಕೇರಳ ರಾಜ್ಯದಲ್ಲಿ ಮತ್ತು ನಮ್ಮ ಕ್ಯಾಷ್ಯೂ ಮೇಲೆ ಏರಿಯಲ್ ಸ್ಪ್ರೇ ಮಾಡುತ್ತಿರುವುದರ ಪರಿಣಾಮ ಬಹಳ ಆರೋಗ್ಯದ ಮೇಲೆ ಅನೇಕ ರೀತಿಯಾದ ದುಷ್ಪರಿಣಾಮವಾಗುತ್ತದೆ ಎಂದು ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ನೋಡಿದ್ದೇನೆ. ಇದನ್ನು ಬಹುತೇಕ ಬೇರೆ ರಾಜ್ಯದಲ್ಲಿ ಆಗುವ ಏರಿಯಲ್ ಸ್ಪ್ರೇಯನ್ನು ನಾವು ತಪ್ಪಿಸಬೇಕು. ಮತ್ತು ನಮ್ಮಲ್ಲೂ ಇರುವ ಕ್ಯಾಷ್ಯೂ ಅದು ನಮ್ಮ ಅರಣ್ಯ ಇಲಾಖೆಗೆ ಬರುತ್ತಿದೆ. ನಾನು ಮತ್ತು ಅರಣ್ಯ ಇಲಾಖೆಯ ಸಚಿವರು ಇಬ್ಬರೂ ಚರ್ಚೆ ಮಾಡಿ ಆ ಎಂಡೋಸಲ್ಫಾನನ್ನು ಪತ್ರಿಕೆಯಲ್ಲಿ ಬಂದ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯದಿಂದ ನಾನು ನಮ್ಮ ಅಧಿಕಾರಿಗಳಿಂದ ವರದಿಯನ್ನು ಕೂಡ ತರಿಸಿಕೊಂಡಿದ್ದೇನೆ. ಅಂತಿಮವಾಗಿ ಇದರ ಬಗ್ಗೆ ಯಾವ ರೀತಿ ಕಾರ್ಯವನ್ನು ಮಾಡಬೇಕೆನ್ನುವ ಬಗ್ಗೆ ಒಂದು ಸಮಗ್ರವಾದ ಹೇಳಿಕೆಯನ್ನು ಜಂಟಿಯಾಗಿ ಕೊಡುವುದಕ್ಕೆ ನಾನು ಇಚ್ಛಿಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಈಗಾಗಲೇ ಇಲಾಖೆಯವರು ಖರೀದಿಯನ್ನು ಮಾಡಿದ್ದಾರೆ, ಉಪಯೋಗಿಸುತ್ತಿದ್ದಾರೆ. ಮತ್ತು ನಾಳೆ ಸಚಿವ ಸಂಪುಟದಲ್ಲಿ ಇನ್ನೂ ಮೂರುವರೆ ಕೋಟಿ ರೂಪಾಯಿಗಳಷ್ಟು ತೆಗೆದುಕೊಳ್ಳುವುದಕ್ಕೆ ಪ್ರಸ್ತಾವನೆ ಕೂಡ ಬಂದಿದೆ. ಅದನ್ನು ತಡೆಹಿಡಿಯಬೇಕು. ತಜ್ಞರಿಂದ ವರದಿಯನ್ನು ತರಿಸಬೇಕೆನ್ನುವುದು ನಮ್ಮ ಆಗ್ರಹ.

1.10 ಪಿ.ಎಂ.

ಶ್ರೀ ಟಿ.ಬಿ. ಜಯಚಂದ್ರ: ನಾನು ಅದನ್ನು ಒಪ್ಪುತ್ತೇನೆ. ನಾವು ಎಂಡೋಸಲ್ಫಾನ್‌ನ ದುಷ್ಪರಿಣಾಮವೇನು ಎನ್ನುವ ಬಗ್ಗೆ ಅಂತಿಮವಾಗಿ ತೀರ್ಮಾನ ಮಾಡಿ ಮುಂದೆ ಪರ್ಚೀಸ್ ಮಾಡಬೇಕೆನ್ನುವ ತೀರ್ಮಾನವನ್ನು ಮಾಡಿದ್ದೇವೆ. ಮಾನ್ಯ ಜಯಪ್ರಕಾಶ್ ಹೆಗಡೆಯವರು ಹೇಳಿದ ರೀತಿಯಲ್ಲಿ ಟ್ರೈ ಟೋಪಾಸ್ ಅದರ ಬಗ್ಗೆ ನಮ್ಮ ತಜ್ಞರು ಏನು ಹೇಳುತ್ತಾರೆ, ಮಾನೋಕ್ರೊಟಕಾಸ್ ಮತ್ತೆ ಡೈಕೊಫಾಲ್ ಇಲ್ಲಿಯವರೆಗೆ ಏನು ಮಾಡುತ್ತಿದ್ದೆವು, ಅದನ್ನು ನಿರಂತರವಾಗಿ ತೆಂಗಿನ ಬೆಳೆ ಮೇಲೆ ಅದು ಸ್ಪ್ರೇ ಆಗುವುದರಿಂದ ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ಟ್ರೈಟೋಪಾಸ್ ಬೆಟರ್ ಎಂದು ಹೇಳಿ ನಾವು ಒಂದು ಸಲಹೆಯನ್ನು ಕೊಟ್ಟ ಹಿನ್ನೆಲೆಯಲ್ಲಿ ಅದನ್ನು ಕೊಂಡುಕೊಳ್ಳಬೇಕೆಂದು ಹೇಳಿ ಒಂದು ತೀರ್ಮಾನ ಮಾಡಿದೆ. ತಾವು ಹೇಳಿದ ರೀತಿಯಲ್ಲಿ ಜನವಾಹಿನಿ ಪತ್ರಿಕೆಯಲ್ಲಿ ಬಂದ ಮಾಹಿತಿ ನನಗೂ ಕೂಡ ಬಂದಮೇಲೆ ಅದನ್ನು ಸಧ್ಯಕ್ಕೆ ನಿಲ್ಲಿಸಿ ಅದರ ಬಗ್ಗೆ ಅಂತಿಮವಾಗಿ ನಾವು ತಜ್ಞರಿಂದ ಅಭಿಪ್ರಾಯವನ್ನು ಪಡೆದು ನಂತರ ಮಾಡಬೇಕೆಂದು ಹೇಳಿ ಮಾಡಿದ್ದೇವೆ. ತಾವು ಹೇಳಿದ ರೀತಿ ತಮಿಳುನಾಡಿನ ಯೂನಿವರ್ಸಿಟಿಯಲ್ಲೂ ಪ್ರಯೋಗವನ್ನು ಮಾಡಿದ್ದಾರೆ. ಅಲ್ಲಿ ಟೆಸ್ಟ್ ರಿಸಲ್ಟ್ ಏನು ಎಂದು ಅಲ್ಲಿನ ವೈಸ್‌ಛಾನ್ಸಲರ್‌ರವರಿಂದ ವರದಿಯನ್ನು ತರಿಸಿ ನಂತರ ನಾವು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಇಡೀ ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದ್ದು. ಮಂತ್ರಿಗಳು ಬಂದಿದ್ದಾರೆ. ತಾವು ಭರವಸೆಯನ್ನು ಕೊಟ್ಟಿದ್ದೀರಿ.

ಅಧ್ಯಕ್ಷರು: ಮಾನ್ಯ ಸಿಂಧ್ಯಾರವರೇ, ಇವತ್ತು ಆರು ವಿಷಯಗಳ ಬಗ್ಗೆ ಶೂನ್ಯ ವೇಳೆಯಲ್ಲಿ ತೆಗೆದುಕೊಂಡಿದ್ದೇವೆ. ನಾಳೆ ಇದನ್ನು ತೆಗೆದುಕೊಳ್ಳೋಣ. ಶೂನ್ಯ ವೇಳೆಯೇ ಒಂದು ಗಂಟೆ ಎರಡು ಗಂಟೆಯಾದರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್: ನಿನ್ನೆ ತಾವೇ ಆದೇಶ ಮಾಡಿದ್ದಿರಿ. ಮಾನ್ಯ ಮಂತ್ರಿಗಳು ಬಂದಾಗ ನೀವೇ ಪ್ರಸ್ತಾಪಮಾಡಿ ಎಂದು ಹೇಳಿದ್ದೀರಿ. ಮಾನ್ಯ ಮಂತ್ರಿಗಳು ಇದ್ದಾರೆ. ಇದು ಹೋದ ಅಧಿವೇಶನದಿಂದಲೂ ಇದೆ.

ಶ್ರೀ ನಾಡಗೌಡ: ಮಾನ್ಯ ಅಧ್ಯಕ್ಷರೇ, ಇವತ್ತು ಬಿಲ್ ಮೇಲೂ ಚರ್ಚೆ ಮಾಡಬೇಕಾಗಿದೆ.

ಅಧ್ಯಕ್ಷರು: ನಾನು ಮಾನ್ಯ ಮಂತ್ರಿಗಳಿಗೆ ನಾಳೆ ಬರುವುದಕ್ಕೆ ತಿಳಿಸುತ್ತೇನೆ. ತಾವು ನಾಳೆ ವಿಷಯವನ್ನು ಪ್ರಸ್ತಾಪಮಾಡಬಹುದು.